ಬರಬಹುದು, ಆದನ್ನಾದರೂ ವಜಾ ಮಾಡಿ. ಟರ್ನ್ ಓವರ್ ಟ್ಯಾಕ್ಸ್‌ನ್ನು, ಸೇಲ್ಸ್ ಟ್ಯಾಕ್ಸ್‌ನ್ನು ವಜಾ ಮಾಡುತ್ತೇವೆ ಆಥವಾ ಇಲ್ಲವೇ ಎಂದು ಹೇಳಿ. ಲೆವಿ ಬಗ್ಗೆ ಕೂಡ ಅಷ್ಟೆ. ಏಕೆಂದರೆ ಅವತ್ತು ನೀವು ಹೇಳಿದಿರಿ, ಈ ಸದನದಲ್ಲಿ ಚರ್ಚೆಯಾಗಿ ಮಿಡ್ಲ್‌ಪಾಯಿಂಟ್‌ನಲ್ಲಿ ಲೆವಿ ಹಾಕುವುದೆಂದು ತೀರ್ಮಾನವಾಯಿತು ಸ್ವಾಮಿ ಅವತ್ತು ಸಬ್ಸಿಡಿ ಇತ್ತು. ಸಬ್ಸಿಡಿ ಇರುವಾಗ ಒಪ್ಪಿರಬಹುದು, ಆ ರೀತಿ ಅವತ್ತು ತೀರ್ಮಾನವಾಗಿರಬಹುದು. ಇವತ್ತು ಸಬ್ಸಿಡಿ ಇದೆಯೇ? ಏತಕ್ಕೆ ನೀವು ಲೆವಿಯನ್ನು ವಸೂಲು ಮಾಡುವುದಿಲ್ಲ ಎಂದು ಹೇಳಿ. ನೀವು ರಾಜ್ಯ ಸರ್ಕಾರ ಮಾಡಬೇಕಾಗಿರತಕ್ಕಂಥದ್ದು ಆದರಿಂದ ಭತ್ತ ಬೆಳೆದಂಥ ರೈತರಿಗೆ. 20–30 ರೂಪಾಯಿ ಕ್ವಿಂಟಾಲ್ ಮೇಲೆ ಜಾಸ್ತಿ ಸಿಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ರಾಜ್ಯ ಸರ್ಕಾರದ ಆಲೋಚನೆಯಲ್ಲಿ ಟರ್ನ್ ಓವರ್ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್ ಬಗ್ಗೆ ಇದೆ. ಆದನ್ನು ಯಾವ ರೀತಿ ಟ್ಯಾಕ್ಸ್ ಹಾಕಬೇಕು. ಹೇಗೆ ಟ್ಯಾಕ್ಸ್ ಹಾಕಬೇಕು ಎನ್ನುವುದನ್ನು ನೋಡುತ್ತೇವೆ.

ಶ್ರೀ ಸಿ. ಬೈರೇಗೌಡ:– ಕಡಿಮೆ ಮಾಡಿ ಎಂದು ಹೇಳಿದರೆ ಹಾಕುತ್ತೇವೆ ಎಂದು ಹೇಳುತ್ತಾರಲ್ಲಾ. ಇದಕ್ಕೆ ಏನು ಹೇಳುವುದು ಮಾನ್ಯ ಅಧ್ಯಕ್ಷರೇ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ತಮಿಳುನಾಡಿನಲ್ಲಿ ಹಾಕಿದ್ದಾರೆ. ನಾವು ಆದನ್ನು ಯಾವ ರೀತಿ ಹಾಕಬೇಕು, ಆಥವಾ ಬೇಡವೇ ಎನ್ನುವುದನ್ನು ಆಲೋಚನೆ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ:– ಸೇಲ್ಸ್ ಟ್ಯಾಕ್ಸ್ ತೆಗೆದುಹಾಕಿ ಎಂದು ನಾನು ಹೇಳುತ್ತಿದ್ದರೆ ಅಲ್ಲಿ ಹಾಕಿದ್ದಾರೆ, ಆದನ್ನು ಯಾವ ರೀತಿ ಹಾಕಬೇಕು ಎನ್ನುವುದನ್ನು ಯೋಚನೆ ಮಾಡುತ್ತೇವೆ ಎಂದು ಹೇಳಿದರೆ ಆ ಉತ್ತರದಿಂದ ನಾನು ಹೇಗೆ ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುತ್ತದೆ? ದಯವಿಟ್ಟು ಹೇಳಿ.

ಅಧ್ಯಕ್ಷರು:– ಮುಂದಿನ ತಿಂಗಳು 22ನೇ ತಾರೀಖು ಬಜೆಟ್ ಬರುತ್ತದೆ. ಆಗ ಯಾವುದರ ಮೇಲೆ ಹಾಕುತ್ತಾರೆ, ಯಾವುದರ ಮೇಲೆ ತೆಗೆಯುತ್ತಾರೆ ಎಂದು ಎಲ್ಲಾ ಗೊತ್ತಾಗುತ್ತದೆ.

ಶ್ರೀ ಸಿ. ಬೈರೇಗೌಡ:– ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾರೆ. ಆ ಘೋಷಣೆಗಳಲ್ಲಿ ನನಗೇನೂ ನಂಬಿಕೆ ಇಲ್ಲ. ಆದರೆ ಈ ಸರ್ಕಾರದ ನೀತಿಯನ್ನು ತೀವ್ರವಾಗಿ ವಿರೋಧ ಮಾಡಿ ನಾನು ಹೊರಗಡೆ ಹೋಗುತ್ತೇನೆ.

(ಸಮಾಜವಾದಿ ಜನತಾ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು.)

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದ ಧೋರಣೆಯಿಂದ, ಇಡೀ ರಾಜ್ಯದ ರೈತರಿಗೆ, ದೇಶದ ರೈತರಿಗೆ ಈ ಸ್ಥಿತಿ ಬಂದಿದೆ. ಇದರ ಬಗ್ಗೆ ತಮ್ಮ ಕ್ರಮವೇನು ಎಂದು ಸ್ಪಷ್ಟವಾಗಿ ಕೇಳಿದೆವು. ಆದನ್ನು ಹೇಳಲಿಲ್ಲ, ರಾಜ್ಯ ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತದೆ? ರೈತನಿಗೆ ಆಗಿರತಕ್ಕಂಥ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಕನಿಷ್ಟ ಈ ರಾಜ್ಯದ ರೈತನ ಸಾಲವನ್ನು ಮನ್ನಾ ಮಾಡುತ್ತೀರಾ ಎಂದು ಕೇಳಿದೆವು ಅದರ ಬಗ್ಗೆಯೂ ಉತ್ತರ ಇಲ್ಲ. ರಾಜ್ಯ ಸರ್ಕಾರ ರೈತರ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ತೋರಿಸುತ್ತಿರುವುದರಿಂದ, ಅದನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಈ ಹಂತದಲ್ಲಿ ಸಭಾತ್ಯಾಗ ಮಾಡಿದರು.)

ಶ್ರೀ ವಾಟಾಳ್ ನಾಗರಾಜ್:– ತಾವು ನಗುವುದು ನೋಡಿದರೆ ನಿಜವಾಗಲೂ ಈ ಸರ್ಕಾರ ನಗೆ ಪಾಟಲಿಗೆ ಸಿಕ್ಕಿದೆ ಎಂದು ತಿಳಿಯುತ್ತದೆ, ಮುಂದಕ್ಕೆ ಹೋಗುವುದು ಬೇಡಿ.

ಅಧ್ಯಕ್ಷರು:– ನಾನು ತಮ್ಮನ್ನು ನೋಡಿ ನಗುತ್ತಿದ್ದೇನೆ. ನಾನು ಸರ್ಕಾರದ ಕಡೆಗೆ ನೋಡಲಿಲ್ಲ.